**ಕೆ.ಕೆ. ಗಂಗಾಧರನ್**

(ಮಾರ್ಚ್ 10, 1949)

ಕಾಸರಗೋಡು ಜಿಲ್ಲೆಯ ಪಾತನಡ್ಕ ಗ್ರಾಮದವರು. ಬಾಲ್ಯ ಕಳೆದುದು ಕೊಡಗಿನ ಸೋಮವಾರಪೇಟೆ ಸಮೀಪದ ಕಬ್ಬಿಣಸೇತುವೆ ಎಂಬಲ್ಲಿ. ಕಾಜೂರು, ಸೋಮವಾರಪೇಟೆ, ಪುತ್ತೂರುಗಳಲ್ಲಿ ವಿದ್ಯಾಭ್ಯಾಸ. ಭಾರತೀಯ ಅಂಚೆ ಇಲಾಖೆಯ ರೈಲ್ವೆ ಮೇಲ್ ಸರ್ವಿಸ್ ವಿಭಾಗದಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರು. ಪ್ರಸ್ತುತ ಬೆಂಗಳೂರು ನಿವಾಸಿ. 'ಒಡನಾಡಿ' ಪತ್ರಿಕೆಗೆ ಬರೆಯುವ ಮೂಲಕ ಅನುವಾದ ಆರಂಭಿಸಿದ ಅವರು, ನಾಲ್ಕು ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ – ತಗಳಿ ಶಿವಶಂಕರ ಪಿಳ್ಳೈ, ಎಂ.ಟಿ. ವಾಸುದೇವನ್ ನಾಯರ್, ವೈಕಂ ಮಹಮ್ಮದ್ ಬಷೀರ್, ಕಮಲಾದಾಸ್ ಸೇರಿದಂತೆ ಮಲಯಾಳಂ ಸಾಹಿತ್ಯದ ಅನೇಕ ಪ್ರಮುಖ ಬರಹಗಾರರನ್ನು ಕನ್ನಡ ಓದುಗರಿಗೆ ಪರಿಚಯಿಸಿದ್ದಾರೆ. ಸಿನಿಮಾ ತಾರೆ ಶಕೀಲಾ ಆತ್ಮಕಥೆಯನ್ನು ಕನ್ನಡಕ್ಕೆ ತಂದಿದ್ದಾರೆ. ಉಣ್ಣಿಕೃಷ್ಣನ್ ಪುದೂರ್, ಮೆಯವೇಲಿ ಬಾಬೂಜಿ, ಅರವಿಂದನ್, ಜಿ.ಡಿ. ಗೇಬ್ರಿಯೆಲ್, ಸುಧಾಕರನ್ ರಾಮಂತಳಿ, ಪಿ.ಎನ್. ವಿಜಯನ್, ಬಾಲಕೃಷ್ಣನ್ ಮಾಂಗಾಡ್, ಸಂತೋಷ್ ಏಚ್ಚಿಕಾನಂ – ಹೀಗೆ, ಕೆಕೆಜಿ ಕನ್ನಡಕ್ಕೆ ಪರಿಚಯಿಸಿರುವ ಲೇಖಕರ ಸಂಖ್ಯೆ ದೊಡ್ಡದು. ಹಲವು ಕಥೆಗಾರರ ರಚನೆಗಳನ್ನೊಳಗೊಂಡ 'ಮಲಯಾಳಂ ಕಥೆಗಳು' ಕೃತಿಗೆ 2023ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಅನುವಾದ ಪ್ರಶಸ್ತಿ ಸಂದಿದೆ.

ವ್ಯಕ್ತಪಡಿಸಿದರು. ನಾಲ್ಕನೆಯ ದಿನ ಅದೇ ಸಂಪಾದಕರು, ಕೆಲಸದಿಂದ ಹೊರದಬ್ಬಿದರು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುವ ಕೆಲಸ ಮಾಡುತ್ತಿದ್ದ ನಾನು, ಒಂದು ಅನುವಾದ ಮಾಡಿದ ಅನುಭವ, ಪತ್ರಕರ್ತನಾಗುವ ಹುಚ್ಚನ್ನು ನುಚ್ಚುನೂರು ಮಾಡಿತು. With the help of villagers the pregnant lady was admitted to hospital ಎಂಬ ಇಂಗ್ಲಿಷ್ ವಾಕ್ಯವನ್ನ ನಾನು, 'ಊರವರ ಸಹಾಯದಿಂದ ಗರ್ಭಿಣಿಯಾದ ಹೆಂಗಸನ್ನು ಆಸ್ಪತ್ರೆಗೆ ಸೇರಿಸಲಾಯಿತು' ಎಂದು ಬರೆದು, ಅದು ಪತ್ರಿಕೆಯಲ್ಲಿ ಮುದ್ರಣವಾಯಿತು. ಅದನ್ನು ಓದಿದ ಸಂಪಾದಕರು ನನ್ನನ್ನು ಕೆಲಸದಿಂದ ತೆಗೆದು ಹಾಕಿದರು. ಅನುವಾದ ಮಾಡುವವಾಗ, ಶಬ್ದ- ವಾಕ್ಯಗಳನ್ನು ಗಂಭೀರವಾಗಿ ಪರಿಗಣಿಸಬೇಕು.

**◆ ಒಂದು ಕೃತಿಯನ್ನು ಅನುವಾದಕ್ಕೆ ಅಳವಡಿಸಿಕೊಳ್ಳುವಾಗ ನೀವು ಪರಿಗಣಿಸುವ ಸಂಗತಿಗಳೇನು?**

ಬೆಂಗಳೂರಿನಲ್ಲಿ ಮಲಯಾಳಂ ಪುಸ್ತಕಗಳು ಸಿಗುವುದು ದುರ್ಲಭ. ಸಾಹಿತ್ಯದಲ್ಲಿ ಆಸಕ್ತಿಯಿರುವ ಕೆಲವು ಮಲಯಾಳೀ ಸ್ನೇಹಿತರ ಮನೆಗೆ ಹೋದಾಗ ಪುಸ್ತಕಗಳು ದೊರೆಯುತ್ತವೆ. ಹಾಗೆಯೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಗ್ರಂಥಾಲಯಕ್ಕೆ ಹೋದಾಗ, ಕೆಲವೊಮ್ಮೆ ಕೇರಳಕ್ಕೆ ಹೋದಾಗ ಪುಸ್ತಕಗಳನ್ನು

